# ಮುತ್ತು ಒಡವೆಗಷ್ಟೇ ಅಲ್ಲ; ಉಡುಗೆಗೂ...

ಮುತ್ತಿನ ಒಡವೆಗಳು ಫ್ಯಾಷನ್‌ಪ್ರಿಯರಿಗೆ ಮೆಚ್ಚು. ಇದೀಗ ಮುತ್ತಿನ ಉಡುಗೆಗಳು ಬಂದಿದ್ದು ಫ್ಯಾಷನ್ ಟ್ರೆಂಡ್ ಕೂಡ ಆಗಿವೆ.

■ ಆಶಾ ಎಸ್. ಕುಲಕರ್ಣಿ



ಫಳಫಳನೇ ಹೊಳೆಯುವ, ಆಕರ್ಷಕವಾಗಿ ಕಾಣುವ ಮುತ್ತಿನ ಒಡವೆಗಳೆಂದರೆ ಮಹಿಳೆಯರಿಗೆ ಎಲ್ಲಿಲ್ಲದ ಪ್ರೀತಿ, ಅಕ್ಕರೆ. ಪರ್ಲ್ಸ್ ಫ್ಯಾಷನ್ ಈಗ ಹಳೆಯದಾದರೂ ಇವುಗಳ ವಿನ್ಯಾಸ ಹಾಗೂ ಧರಿಸುವ ಶೈಲಿ ಮಾತ್ರ ದಿನದಿಂದ ದಿನಕ್ಕೆ ನವನವೀನ. ಮದುವೆ ಇನ್ನಿತರ ಶುಭ ಸಮಾರಂಭ ಎಂದರೆ ಕೇಳಬೇಕೆ, ಮಹಿಳೆಯರಿಗೆ ಎಷ್ಟೆಲ್ಲಾ ಅಲಂಕರಿಸಿಕೊಂಡರೂ ಸಾಲದು. ಅದರಲ್ಲೂ ಫಳಫಳನೇ ಹೊಳೆಯುವ ಮುತ್ತು ಕಂಡರೆ ಅವರಿಗೆ ಅತ್ಯಂತ ಅಚ್ಚುಮೆಚ್ಚು. ತಾವು ಧರಿಸುವ ಗ್ರ್ಯಾಂಡ್ ಸೀರೆಗೋ ಇಲ್ಲವೇ ಗೌನ್‌ಗೋ ಅಥವಾ ಇನ್ನಿತರ ವೆರೈಟಿ ಉಡುಪುಗಳಿಗೆ ಮ್ಯಾಚ್ ಆಗುವ ಬಣ್ಣ ಬಣ್ಣದ ಹೊಳೆಯುವ ಮುತ್ತಿನ ಆಭರಣ ಧರಿಸಿದರೆ ಮಾತ್ರ ಅವರ ಅಲಂಕಾರ ಪೂರ್ಣಗೊಂಡಂತೆ.

ಅದು ಬರೀ ಒಂದೆಳೆ ಮುತ್ತಿನ ಸರ ಸಾಕಾಗುವುದಿಲ್ಲ. ಕನಿಷ್ಠ ಎಂದರೆ ಮೂರರಿಂದ ನಾಲ್ಕು ಎಳೆಗಳ ಮುತ್ತಿನ ಸರ ಧರಿಸಲೇಬೇಕು. ಅದರ ಜೊತೆಗೆ ಕಿವಿಯಲ್ಲಿ ಧರಿಸುವ ಮುತ್ತಿನ ಓಲೆ, ಕೈಯಲ್ಲಿ ಧರಿಸುವ ಮುತ್ತಿನ ಸಾಲು ಸಾಲು ಬಳೆಗಳು, ಹಾಗೇ ಉಂಗುರದಲ್ಲಿಯೂ ಕೂಡ ಹರಳಿನ ಬದಲಿಗೆ ಮುತ್ತು, ಇವೆಲ್ಲದರ ಹೊರತಾಗಿ ಈಗಿನ ಫ್ಯಾಷನ್‌ಪ್ರಿಯರಿಗೋಸ್ಕರ ವಿನೂತನವಾಗಿ ತಯಾರಿಸಲಾದ ಮುತ್ತಿನ ಗೆಜ್ಜೆಗಳ ಜೊತೆಗೆ ಮುತ್ತಿನ ಬಿಂದಿಗಳು. ಹೀಗೆ ಹೇಳುತ್ತಾ ಹೋದರೆ ಅದು ಮುಗಿಯದ ಕಥೆ. ಈ ಮುತ್ತುಗಳ ಪ್ರಪಂಚ ಇಂದು ನಿನ್ನೆಯದಲ್ಲ. ರಾಜ ಮಹಾರಾಜರ ಕಾಲದಿಂದಲೂ ಇವಕ್ಕೆ ಎಲ್ಲಿಲ್ಲದ ಬೇಡಿಕೆ. ಈ ಮುತ್ತಿನ ಸರಮಾಲೆಗಳನ್ನು ಧರಿಸಲು ಗಂಡು, ಹೆಣ್ಣು ಎಂಬ ಭೇದಭಾವವಿಲ್ಲ. ಆಗಿನ ಕಾಲದಲ್ಲಿ ರಾಜ ಮಹಾರಾಜರು ಕನಿಷ್ಠ ಪಕ್ಷ ಎಂದರೆ ಹತ್ತು ಎಳೆಗಳ ಮುತ್ತಿನ ಸರ ಮಧ್ಯೆ ದೊಡ್ಡದಾಗಿ ಹೊಳೆಯುವ